ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 268/2016

.....................................................................

CW 12
PW 10

ಹೆಸರು : ರವಿ ಪಟಗಾರ

ತಂದೆಯ ಹೆಸರು : ಹೊನ್ನಪ್ಪ

ವಯಸ್ಸು : 39 ವರ್ಷ

ಉದ್ಯೋಗ : ಮುಖ್ಯ ಪೇದೆ

ವಾಸಸ್ಥಳ : ಭಟ್ಕಳ.

ದಿನಾಂಕ 13-09-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು 2013 ರಲ್ಲಿ ಹಳಿಯಾಳದ ಸಿ ಪಿ ಐ ಕಚೇರಿಯಲ್ಲಿ ಸಿ ಪಿಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 1 ರವರು ಹಳಿಯಾಳ ಸಿ ಪಿ ಐ ಆಗಿದ್ದರು ಹಾಗೂ ಆರೋಪಿಯು ಆ ಸಮಯದಲ್ಲಿ ಠಾಣಾ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದನು ಹಾಗೂ ಚಾಸಾ 10 ರವರು ತನಿಖಾ ಸಹಾಯಕನಾಗಿ, ಚಾಸಾ 11 ರವರು ಸಿ ಪಿ ಐ ರವರ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಕಂಪ್ಯೂಟರ ಕೆಲಸವನ್ನು ನಾನು ನಿರ್ವಹಿಸಬೇಕೆಂದು ಚಾಸಾ 1 ರವರು ನನಗೆ ಜ್ಞಾಪನ ನೀಡಿದ್ದರು. ಅದೇ ರೀತಿ ಆರೋಪಿಗೆ ಬರಹಗಾರನಾಗಿ ಕಚೆರೀಯ ಕಡತ, ಮೋಟಾರ ವಾಹನ ಸ್ಥಳ ದಂಡ ರಜಿಸ್ಟರ ನಿರ್ವಹಣೆ, ದಂಡ ವಸೂಲಾದ ಬಗ್ಗೆ ನಗದು ಪುಸ್ತಕ ನಿರ್ವಹಣೆ, ಬ್ಯಾಂಕಿಗೆ ದಂಡದ ಹಣವನ್ನು ತುಂಬುವ ಬಗ್ಗೆ ಹಾಗೂ ಹಣವನ್ನು ತುಂಬಿ ಆದ ನಂತರ ಅದರ ರಸೀದಿಯನ್ನು ಸಂಬಂಧಿಸಿದ ರಜಿಸ್ಟರ ನಲ್ಲಿ ನಮೂದು ಮಾಡುವ ಹಾಗೂ ನಗದು ಪುಸ್ತಕ ಖಾಲಿ ನಂತರ ಜಿಲ್ಲಾ ಉಪ ಕಚೇರಿಯಿಂದ ಮತ್ತೆ ನಗದು ಪುಸ್ತಕಗಳನ್ನು ತರಿಸುವ ಕೆಲಸ ನಿರ್ವಹಿಸಬೇಕೆಂದು ಚಾಸಾ 1 ರವರು ಆರೋಪಿಗೆ ತಿಳಿಸಿರುತ್ತಾರೆ ಹಾಗೂ ಮೇಲಿನ ದಾಖಲೆಗಳು ಆರೋಪಿಯ ಸ್ವಾಧೀನದಲ್ಲಿ ಇರುತ್ತಿದ್ದವು.

ಅದೇ ರೀತಿ ಚಾಸಾ 10 ರವರಿಗೆ ತನಿಖಾ ಸಹಾಯಕರಾಗಿ, ಪ್ರಕರಣದ ಕಡತಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಚಾಸಾ 1 ರವರು ನೀಡಿದ್ದರು. ಅದೇ ರೀತಿ ಚಾಸಾ 11 ರವರಿಗೆ ಚಾಸಾ 1 ರವರ ಚಾಲಕನಾಗಿ ಕರ್ತವ್ಯ ನಿರ್ವಹಿಸಲು ಜವಾಬ್ದಾರಿ ನೀಡಲಾಗಿತ್ತು.

ಸ್ಥಳ ದಂಡ ಮೊತ್ತವನ್ನು ಸಂಗ್ರಹಿಸಿದ ನಂತರ ಅದನ್ನು ಬ್ಯಾಂಕಿಗೆ ತುಂಬಲು ಚಲನ್ ಗೆ ಚಾಸಾ 1 ರವರು ಸಹಿ ಮಾಡುತ್ತಿದ್ದರು ಹಾಗೂ ಆರೋಪಿಯು ಸದರಿ ಹಣವನ್ನು ಬ್ಯಾಂಕಿಗೆ ತುಂಬಿ ರಸೀದಿಯನ್ನು ವಾಪಸ್ ತಂದು ಠಾಣಾ ರಜಿಸ್ಟರ ನಲ್ಲಿ ಹಚ್ಚಿ ಇಡುತ್ತಿದ್ದರು ಹಾಗೂ ಸದರಿ ರಜಿಸ್ಟರ ಮತ್ತು ರಸೀದಿಗಳು ಆರೋಪಿಯ ಬಳಿ ಇರುತ್ತಿದ್ದವು ಹಾಗೂ ಆ ರೀತಿ ಬ್ಯಾಂಕಿಗೆ ದಂಡವನ್ನು ಜಮಾ ಮಾಡುವ ಸಮಯದಲ್ಲಿ ಆರೋಪಿಯು ಆ ಬಗ್ಗೆ ನಮಗೆ ಹೇಳಿ ಹೋಗುತ್ತಿದ್ದನು ಹಾಗೂ ಹಣವನ್ನು ತುಂಬಿದ ನಂತರ ಆ ಬಗ್ಗೆಯೂ ಸಹ ನಮಗೆ ಬಂದು ಹೇಳುತ್ತಿದ್ದನು. ಆದರೆ ಎಷ್ಟು ಹಣ ಬ್ಯಾಂಕಿಗೆ ತುಂಬುತ್ತಿದ್ದ ಎನ್ನುವುದರ ಬಗ್ಗೆ ನಮಗೆ ಹೇಳುತ್ತಿರಲಿಲ್ಲ.

ದಿನಾಂಕ 10-07-2013 ರಂದು ಚಾಸಾ 1 ರವರು ಆರೋಪಿಯು ಸ್ಥಳ ದಂಡ ಮೊತ್ತವಾದ ರೂ.30,100/- ಗಳ ಪೈಕಿ ಕೇವಲ ರೂ. 2,700/- ಮಾತ್ರ ಬ್ಯಾಂಕಿಗೆ ತುಂಬಿದ್ದು, ಉಳಿದ ಮೊತ್ತವನ್ನು ತುಂಬದೇ ಇರುವುದನ್ನು ಉಪ-ಖಜಾನೆಯ ಪೊಲೀಸ ಲೆಕ್ಕ ಶಿರ್ಷಿಕೆಯಲ್ಲಿ ಪರಿಶೀಲಿಸಿ ಗೊತ್ತಾಗಿರುವ ಬಗ್ಗೆ ಚಾಸಾ 1 ರವರು ನನಗೆ ತಿಳಿಸಿರುತ್ತಾರೆ. ಆ ಬಗ್ಗೆ ಆರೋಪಿಯನ್ನು ಕೇಳಿದಾಗ ತಾನು ಹಣ ತುಂಬಿದ್ದೇನೆ ಎಂದು ತಿಳಿಸಿರುತ್ತಾನೆ. ಆ ಬಗ್ಗೆ ದಾಖಲೆ ಕೇಳಿದಾಗ ಚಲನ್ ಗಳನ್ನು ಆರೋಪಿಯು ಸಿ ಪಿ ಐ ಕಚೇರಿಯಲ್ಲಿ ಹುಡುಕುತ್ತಾನೆ. ಆದರೆ ಸದರಿ ಚಲನ ಗಳು ಸಿಗುವುದಿಲ್ಲ. ನಂತರ ಆರೋಪಿಯು ತಾನು ಸದರಿ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದೇನೆ, ಸದರಿ ಹಣವನ್ನು ಮರಳಿ ನೀಡುತ್ತೇನೆ, ತನ್ನಿಂದ ತಪ್ಪಾಯಿತು ಎಂದು ಚಾಸಾ 1 ರವರಿಗೆ ತಿಳಿಸಿರುತ್ತಾನೆ. ಬಾಕಿ ಉಳಿದ ಹಣವನ್ನು ದಿನಾಂಕ 15-07-2013 ರಂದು ಬ್ಯಾಂಕಿಗೆ ತುಂಬಿದನು. ಆರೋಪಿಯು ಸ್ಥಳ ದಂಡ ಹಣವನ್ನು ಬ್ಯಾಂಕಿಗೆ ತುಂಬದೇ ಸ್ವಂತಕ್ಕೆ ಬಳಸಿಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿರುವ ಬಗ್ಗೆ ಚಾಸಾ 1 ರವರು ಆರೋಪಿಯ ವಿರುದ್ಧ ದೂರು ನೀಡಿರುತ್ತಾರೆ. ಮೇಲಿನ ಸಂಗತಿಗಳ ಕುರಿತು ಚಾಸಾ 15 ರವರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1, ಚಾಸಾ 15 ಮತ್ತು 16 ರವರು ನನ್ನ ಮೇಲಾಧಿಕಾರಿಗಳು ಹಾಗೂ ಚಾಸಾ 10 ಮತ್ತು 11 ರವರು ನಮ್ಮ ಸಿಬ್ಬಂದಿಗಳು ಎಂದರೆ ಸರಿ. ಕಂಪ್ಯೂಟರ ಕೆಲಸವನ್ನು

ನಿರ್ವಹಿಸಬೇಕೆಂದು ಚಾಸಾ 1 ರವರು ನೀಡಿದ ಜ್ಞಾಪನ ವನ್ನು ನಾನು ತನಿಖಾಧಿಕಾರಿಗೆ ನೀಡಿಲ್ಲ. ದಿನಾಂಕ 16-07-2013 ರಂದು ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ದಿನಾಂಕ 23-07-2013 ರಂದು ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ. ನಾನು ಯಾವುದೇ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ರೂ.30,000/- ರೂ ಗಳ ಪೈಕಿ ಕೇವಲ ರೂ. 2,100 ರೂ ಗಳನ್ನು ತುಂಬಿರುತ್ತಾನೆ ಹಾಗೂ ಉಳಿದ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದಾನೆ , ನಂತರ ಆರೋಪಿ ತನ್ನ ತಪ್ಪನ್ನು ಒಪ್ಪಿಕೊಂಡು ಉಳಿದ ಹಣವನ್ನು ಮರಳಿ ತುಂಬುತ್ತೇನೆ ಎಂದು ಚಾಸಾ 1 ರವರಿಗೆ ತಿಳಿಸಿರುತ್ತಾನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಚಾಸಾ 1 ರವರು ನನ್ನ ಮೇಲಾಧಿಕಾರಿ ಆಗಿರುವುದರಿಂದ ಅವರ ಆದೇಶ ನಾನು ಪಾಲಿಸುತ್ತೇನೆ ಎಂದರೆ ಸರಿ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಆದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಹಳಿಯಾಳ